
ಹಾರಿ ಬಂದಂತೆ ಊಟಕ್ಕೆ ಹೋಗಿದ್ದವರೆಲ್ಲಾ ಅವರವರ ಕುರ್ಚಿಗಳ ಎರಡೇ ನಿಮಿಷಗಳಲ್ಲಿ ತುಂಬಿಬಿಟ್ಟರು. ಅಯ್ಯಯ್ಯೋ ಇದೆಂಥಾ ಹುಚ್ಚು! ನನ್ನ ಪತ್ರವೀಗ ಎಲ್ಲರ ಕಣ್ಮುಮುಂದೆ! ಅದನ್ಯಾರಾದರೂ ನೋಡುವ ಮೊದಲೇ ಕಿತ್ತೆಸೆಯಬೇಕು.

'ಏನಾಯ್ತು, ಎನಿ ಪ್ರಾಬ್ಲಮ್?' ಹಿಂದಿನಿಂದ ಬಂದ ಆ ಮಾತು ಒಂದೇ ಸಮನೆ ಬಡಿಕೊಳ್ಳುತ್ತಿದ್ದ ಹೃದಯವನ್ನು ಸೀಳಿದಂತನಿಸಿತು. 'ಊಟಕ್ಕೂ ಬರ್ಲಿಲ್ಲ?' ಹಾಗೆಯೇ ಮುಂದೆ ಬರುತ್ತಾ ಕೇಳಿದ. 'ಏನಿಲ್ಲ ಸ್ವಲ್ಪ ಹುಷಾರಿಲ್ಲ' ಜಾರಿಕೊಳ್ಳುವಂತ ನನ್ನ ಮಾತನ್ನು ಕೇಳಿಯೂ ಮತ್ತೆ 'ಟ್ಯಾಬ್ಲೆಟ್ ಬೇಕಾ, ಅದರ್‌ವೈಸ್ ತುಂಬ ಕಷ್ಟ ಆಗ್ತಿದ್ರೆ ವೈ ಕಾಂಟ್ ಯು ಟೇಕ್ ಆಫ್.' 'ಇಟ್ಸ್ ಓಕೆ, ಥಾಂಕ್ಸ್' ಎಂದು ಮುಖ ತಿರುಗಿಸಿಬಿಟ್ಟೆ. ಈ ರಾಘವನಿಗೆ ಬೇರೆ ಕೆಲಸವಿಲ್ಲವೇನೋ– ನನ್ನ ವಿಚಾರಿಸಲು ಬಂದುಬಿಟ್ಟಿದ್ದಾನೆ. ಅದೇನು ವಿಚಿತ್ರ ಮೋಹವೋ ಇವನಿಗೆ. ನಾ ಬರೆಯುವ ಸ್ಟೇಟಸ್‌ಗಳು ಇವನಿಗಾಗೇ ಎಂದು ಭಾವಿಸಿ ಅದಕ್ಕೊಂದು ಕೆಟ್ಟ ಪದ್ಯ ಬರೆದು ಕಳಿಸಿದಾಗ ಬರುತ್ತಿದ್ದ ಕೋಪಕ್ಕಿಂತ ಇಂದು ಹೆಚ್ಚೇ ಬಂದಿತ್ತು. ತಿರುತಿರುಗಿ ಬೇರೆ ನೋಡುತ್ತಿದ್ದ. ಅವನ ತಪ್ಪಿಸಿ ಪತ್ರ ತೆಗೆಯಲಾದೀತೇ ಅನ್ನಿಸಿಬಿಟ್ಟಿತು. ಯಾರಾದರೂ ನೋಡಿರಬಹುದೆಂಬ ಗುಮಾನಿಯಿಂದ ಸುತ್ತಲೂ ನೋಡಿದೆ, ಅವರವರ ಕೆಲಸದಲ್ಲಿ ಎಲ್ಲರೂ ನಿರತರಾಗಿದ್ದರು. ಆ ಗೂಬೆ ರಾಘವ ಮಾತ್ರ ಇಲ್ಲೇ ನೋಡುತ್ತಿದ್ದ.

ಮೇಲಕ್ಕೇಳುತ್ತಿದ್ದಂತೆ ಅವನೆಡೆಗೆ ನಾನೇ ನೋಡಿಬಿಟ್ಟೆ. ಥೂ! ಅವನೂ ನೋಡಿದ. ಊಟ ಮಾಡಿ ಬರುತ್ತೇನೆಂಬ ನನ್ನ ಕೈಸನ್ನೆಗೆ, ಹೆಬ್ಬೆರಳ ಮೇಲಾಗಿಸಿ ಗೆಲುವು ನಿನ್ನದೇ ಎನ್ನುವಂತೆ ವಿಶ್ವಾಸದ ನಗೆ ಬೀರಿದ. ಅವನ ಕಡೆಗೆಂದೂ ತಿರುಗಿ ನೋಡದ ನಾನು ಇಂದೇಕೋ ಭಾರೀ ಪ್ರತಿಕ್ರಿಯಿಸಿದೆನಂತೆನಿಸಿ ನನಗೇ ಮುಜುಗರವೆನಿಸಿತು. ಬೋರ್ಡು ಸಮೀಪಿಸುತ್ತಿದ್ದಂತೆ ಅರೆಕ್ಷಣದಲ್ಲಿ ಕೀಟಗಳ ಹಿಡಿದು ಲಬಕ್ ಎಂದು ಬಾಯಿಗೆ ಹಾಕಿಕೊಳ್ಳುವ ಹಲ್ಲಿಯ ನಾಲಗೆಯಂತೆ ಬಲಗೈ ಚುರುಕಾಯಿತು. ಬಳಿ ಹೋಗಿ ಇನ್ನೇನು ಕೈಯೆತ್ತಿದವಳೇ ಅವನತ್ತ ಇಣುಕಿಬಿಡಬೇಕೇ! ಎರಡೆಣಿಸುವಷ್ಟರಲ್ಲಿ ಅವನೂ ನನ್ನ ನೋಡಿದ. ಅದೇ ಗೂಬೆಯ ನಗು. ನಾ ಅಲ್ಲೇ ಇದ್ದಷ್ಟು ಪತ್ರದ ಕಡೆ ಗಮನ ಬರಬಹುದೆನಿಸಿ ಕಾಲ್ಕಿತ್ತೆ.

ಒಳ ಹೆಜ್ಜೆಯಿಡುತ್ತಿದ್ದಂತೆ ಸ್ವಾಗತಕ್ಕೇ ಕಾದಿದ್ದವನ ಹಾಗೆ ಹಲ್ಲಿನ ಝುಳಪಿನಿಂದ ಆರತಿ ಬೆಳಗಿದ. ಅವನನ್ನೆತ್ತಿ ಕಿಟಕಿಯಿಂದಾಚೆಗೆ ಎಸೆದುಬಿಡಬೇಕೆನಿಸಿತು. ಸುಮ್ಮನೇ ಹೋಗಿ ಕುಳಿತುಬಿಟ್ಟೆ. ಪತ್ರವನ್ನು ಯಾರೂ ಗಮನಿಸಿದಂತನಿಸಿರಲಿಲ್ಲ. ಸಂಜೆ ಎಲ್ಲರ ಜೊತೆಗೇ ನಾನೂ ಹೊರ ಬರುವಂತಾಯಿತು. ಬಹಳ ದಿನಗಳಿಂದ ಅದು ಖಾಲಿಯೇ ಇದ್ದದ್ದರಿಂದಲೋ ಇಲ್ಲ ತಲೆ ಎತ್ತಿ ಅದನ್ನು ನೋಡುವ ಪ್ರಯಾಸಕ್ಕೆ ಯಾರೂ ಬೀಳದೆಯೋ. ಒಟ್ಟಿನಲ್ಲಿ ಈ ದಿನ ಅದನ್ನು ಯಾರೂ ನೋಡಿದಂತೆ ಅನಿಸಲಿಲ್ಲ. ಮುಂಜಾನೆ ಬೇಗ ಬಂದು ಅದನ್ನು ತೆಗೆದು ಬಿಡಬೇಕೆಂಬುದೇ ಧ್ಯಾನವಾಗಿಬಿಟ್ಟಿತ್ತು.



ಎಂದೆಂದೂ ಇರದಂತೆ ಇಂದು ಮೊದಲೇ ಆಫೀಸಿಗೆ ಹಾಜರಾಗಿ, ಒಳ ಹೊಕ್ಕುತ್ತಿದ್ದಂತೆ ಪತ್ರವ ತೆಗೆದು, ಬ್ಯಾಗಿನಲ್ಲಿ ತುರಿಸಿಬಿಟ್ಟೆ. ನನ್ನ ಜಾಗಕ್ಕೆ ಹೋಗಿ ಕುಳಿತುಕೊಳ್ಳುತ್ತಿದ್ದಂತೆ ಎಂಥಾ ಬಿಡುಗಡೆ! ಹಾಗೆಯೇ ಟೇಬಲಿನ ಮೇಲೆ ತಲೆ ಹಾಕಿದೆ. ಹತ್ತೇ ನಿಮಿಷಗಳ ನಿದ್ದೆ, ರಾತ್ರಿಯ ಅರೆನಿದ್ದೆಗಿಂತ ಮಂದವಾಗಿತ್ತು. ಎಂದಿನಂತೆ ಕೆಲಸದ ಮಧ್ಯೆ ಬ್ಯಾಗಿಗೆ ಕೈಹಾಕಿದಾಗ ಪತ್ರವೊಂದು ಕೈತಾಗಿತು.

'ಪ್ರಿಯ ರಾಧಾ,